## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 06-09-2022

### ಮಾರ್ಕೆಟ ಪೊಲೀಸ ಠಾಣೆ ಬೀದರ ಅಪರಾಧ ಸಂಖ್ಯೆ 65/2022 ಕಲಂ 454, 457, 380 ಐಪಿಸಿ ;-

ದಿನಾಂಕ 05-09-2022 ರಂದು 1415 ಗಂಟೆಗೆ ಫಿರ್ಯಾದಿ ಶ್ರೀಮತಿ ಬೇಬಿ ಗಂಡ ವಿಶ್ವನಾಥ ಸ್ವಾಮಿ ವಯ 42 ವರ್ಷ ಜಾತಿ ಸ್ವಾಮಿ ಉ;ಹೋಟಲನಲ್ಲಿ ಅಡುಗೆ ಮಾಡುವ ಕೆಲಸ ಸಾ:ಶಾಹಪೂರ ಗೇಟ ಬೀದರ ಇವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೇನಂದರೆ ದಿನಾಂಕ 05-09-2022 ರಂದು ರಾತ್ರಿ 0130 ಗಂಟೆಯ ವರೆಗೆ ಗಣೇಶ ಮರೆವಣಿಗೆ ನೋಡಿ ಬೀದರ ನಗರದ ಹೊರ ಶಾಹಗಂಜದಲ್ಲಿರುವ ತನ್ನ ತಂಗಿ ನಾಗಮಣಿ ಇವಳ ಮನೆಗೆ ಹೋಗಿ ರಾತ್ರಿ ಅಲ್ಲೆ ಮಲಗಿರುತ್ತಾರೆ ಹೀಗಿರುವಾಗ ಅಪರಿಚಿತ ಕಳ್ಳರು ಶಹಾಪೂರಗೇಟ ಹತ್ತಿರವಿರುವ ಫರ್ಯಾದಿಯು ಮನೆಯಲ್ಲಿ ಅಕ್ರಮ ಪ್ರವೇಶ ಮಾಡಿ ಅಲಮಾರಾದಲ್ಲಿರುವ 1) 2 ತೋಲೆ ಬಂಗಾರದ ಸರಾ ಅ.ಕಿ.1,00,000=00 ರೂ 2) 9 ಗ್ರಾಂ. ಬಂಗಾರದ ಕೂಂಡಲ (ಕಿವಿಯ ಹೋವು) ಅ.ಕಿ.45,000=00 ರೂ 3) 3 ಗ್ರಾಂ 500 ಮಿಲಿ ಬಂಗಾರದ ಉಂಗುರ ಇದರ ಅ.ಕಿ.17500=00 ರೂ 4) 4 ಗ್ರಾಂ ಬಂಗಾರದ ಒಂದು ಮಂಗಳ ಸೂತ್ರ ಇದರ ಅ.ಕಿ.20,000=00 ರೂ 5) 15 ತೋಲೆ ಬೆಳ್ಳಿಯ ಚೈನ್ ಇದರ ಅ.ಕಿ.10500=00 ರೂ ಹಾಗು 6) ನಗದು ಹಣ 20,000=00 ರೂ. ಹೀಗೆ ಒಟ್ಟು 2,13000=00 ರೂ ಮತ್ತು ಇತರೆ ವಸ್ತುಗಳ ಒಟ್ಟು ಅ.ಕಿ.10,000=00 ರೂ ಹಾನಿ ಆಗಿರುತ್ತದೆ. ಯಾರೂ ಅಪರಿಚಿತ ಕಳ್ಳರೂ ದಿನಾಂಕ 04-09-2022 ರಂದು ಸಾಯಂಕಾಲ 1730 ಗಂಟೆಯಿಂದ ದಿನಾಂಕ 05-09-2022 ರಂದು 0600 ಗಂಟೆಯ ಅವಧಿಯಲ್ಲಿ ಮನೆಯ ತಗಡ ತೆಗೆದು ಮನೆಯ ಒಳಗೆ ಪ್ರವೇಶಿಸಿ ಮನೆಯಲ್ಲಿರುವ ಈ ಮೇಲಿನ ಬಂಗಾರದ ಮತ್ತು ಬೆಳ್ಳಿಯ ಅಭರಣಗಳು, ನಗದು ಹಣ ಕಳವು ಮಾಡಿಕೊಂಡು, ಹೋಗಿರುತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 140/2022 ಕಲಂ 32(3) ಕೆಇ ಕಾಯ್ದೆ:-

ದಿನಾಂಕಃ 05/09/2022 ರಂದು 14:00 ಗಂಟೆಗೆ ಪಿಎಸ್.ಐ. ರವರು ಪೊಲೀಸ್ ಠಾಣೆಯಲ್ಲಿದ್ದಾಗ ಮೋಬೈಲ್ ಮುಖಾಂತರ ಖಚಿತ ಬಾತ್ಮಿ ಬಂದಿದ್ದೇನೆಂದರೆ, ಗಡವಂತಿ ಗ್ರಾಮದ ಹನುಮಾನ ಮಂದಿರದ ಹತ್ತಿರ ವೈಜನಾಥ ತಂದೆ ರಾಜಣ್ಣ ದೊಡಮನಿ ರವರು ತನ್ನ ಹೊಟೇಲ್ ನಲ್ಲಿ, ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೆ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಅನುವು ಮಾಡಿಕೊಟ್ಟಿರುತ್ತಾನೆ ಅಂತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೊಟೇಲ್ ಒಳಗಡೆ ಹೋಗಿ, ಚೆಕ್ ಮಾಡಿ ನೋಡಲು ಒಂದು ಟೇಬಲ್ ಮೇಲೆ ಸರಾಯಿ ಬಾಟಲ, ಪ್ಲಾಸ್ಟಿಕ್ ಗ್ಲಾಸ್ ಗಳು ಮತ್ತು ನೀರಿನ ಬಾಟಲಗಳು ಇದ್ದವು. ಅಲ್ಲೆ ಹಾಜರಿದ್ದ ಒಬ್ಬ ವ್ಯಕ್ತಿಗೆ ಹಿಡಿದು ಆತನ ಹೆಸರು ಮತ್ತು ವಿಳಾಸ ವಿಚಾರಿಸಲು ಅವರು ತಮ್ಮ ಹೆಸರು 1) ವೈಜನಾಥ ತಂದೆ ರಾಜಣ್ಣ ದೊಡಮನಿ ವಯಃ 31 ವರ್ಷ ಜಾತಿಃ ಎಸ್ ಟಿ ಗೊಂಡ ಉ: ಹೊಟೇಲ್ ಕೆಲಸ ಸಾಃ ಗಡವಂತಿ ತಾಃ ಹುಮನಾಬಾದ ಅಂತಾ ತಿಳಿಸಿ, ಮುಂದೆ ತಿಳಿಸಿದೆನೆಂದ್ದರೆ, ಈ ಹೊಟೇಲ್ ನನ್ನದೆ ಇರುತ್ತದೆ, ನಾನು, ನಮ್ಮ ಹೊಟೇಲ್ ನಲ್ಲಿ ಟೇಬಲಗಳು ಹಾಕಿ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಅನುವು ಮಾಡಿ ಕೊಟ್ಟಿರುತ್ತೇನೆ ಅಂತಾ ತಿಳಿಸಿದನು. ನಂತರ ಆತನಿಗೆ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಅನುವು ಕುರಿತು ಸರಕಾರದಿಂದ ಪಡೆದುಕೊಂಡಿರುವ ಪರವಾನಿಗೆ ತೋರಿಸಲು ಹೇಳಿದಾಗ ಆತನು ತಮ್ಮ ಹತ್ತಿರ ಯಾವುದೇ ಪರವಾನಿಗೆ ಇರುವುದಿಲ್ಲಾ ಅಂತ ತಿಳಿಸಿದನು ಮತ್ತು ಓಡಿ ಹೋದವರ ವಿಳಾಸ ವಿಚಾರಿಸಿದಾಗ ಅವರ ಹೆಸರು ಮತ್ತು ವಿಳಾಸ ಗೊತ್ತಿರುವುದಿಲ್ಲಾ ಅಂತ ತಿಳಿಸಿದರು. ನಂತರ ಪಂಚರ ಸಮಕ್ಷಮದಲ್ಲಿ ಸದರಿ ಸ್ಥಳವನ್ನು ಪರಿಶೀಲಿಸಿ ನೋಡಲು ಟೇಬಲ್ ಮೇಲೆ 1] 90 ಎಮ್ಎಲ್ ನ 02 ಒರಿಜಿನಲ್ ಚೌಯ್ಸ ಪಾಕೇಟ್ ಗಳು ಇದ್ದು, ಅವುಗಳಲ್ಲಿ ಅರ್ಧ ಖಾಲಿಯಾಗಿದ್ದವು, ಅವುಗಳ ಒಟ್ಟು ಅಂದಾಜು ಕಿಮ್ಮತ್ತು 35/- ರೂಪಾಯಿ 2] 650 ಎಮ್ ಎಲ್ ನ 1 ಕಿಂಗ್ ಪಿಶರ್ ಬಾಟಲ್ ಇದ್ದು, ಅದು ಕೂಡ ಅರ್ಧ ಖಾಲಿ ಯಾಗಿದ್ದು, ಅದರ ಅಂದಾಜು ಕಿಮ್ಮತ್ತು 80=00 ರೂಪಾಯಿಗಳು 3) 02 ಪ್ಲಾಸ್ಟಿಕ್ ಗ್ಲಾಸಗಳು ಅ:ಕಿ: 00=00 ನೇದವುಗಳನ್ನು ಪಂಚರ ಸಮಕ್ಷಮದಲ್ಲಿ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.